ಬಿಡುವಾ ಎಂದು ಸುಮನಾ ಅವರ ಛೇಂಬರ್‌ಗೆ ತಲೆ ಹಾಕಿದರೆ, ಕತ್ತಿಗೆ ಸುತ್ತಿಕೊಂಡ ಹಗ್ಗ ಅವರ ದೇಹವನ್ನು ಫ್ಯಾನಿನ ಆಧಾರದಲ್ಲಿ ನೇತಾಡಿಸುತ್ತಿದೆ. ಮೂಗಿನ ರಕ್ತ ಏಪ್ರಾನಿನ ಮೇಲೆ ತೊಟ್ಟಿಕ್ಕಿ ಒಣಗಿ ಕಲೆಯಾಗಿದೆ. ಏನು ಮಾಡುವುದು ಗೊತ್ತಾಗಲಿಲ್ಲ. ಸುಧಾರಿಸಿಕೊಂಡು ಪೊಲೀಸರಿಗೆ ತಿಳಿಸಿ, ಅನುಮತಿ ಪಡೆದು ಹೆಣವನ್ನು ಆಂಬುಲೆನ್ಸ್‌ನಲ್ಲಿ ಸರೋವರದ ತಡಿಯ ಮನೆಗೆ ತಂದೆವು. ಶವದ ಏಪ್ರಾನಿನಲ್ಲಿ ಚೀಟಿ. ಅದರಲ್ಲಿ ಮೂರ್ನಾಲ್ಕು ಕನ್ನಡ ವಾಕ್ಯ.

ಶವ ವಾಹನಕ್ಕೆ ದೂರವಾಣಿ ಮಾಡುವ ಮೊದಲು ಮನವಳ್ಳಿ ಮಕ್ಕಳಿಗೆ ಕರೆ ಕೊಟ್ಟರು. ನ್ಯೂಯಾರ್ಕ್‌ನಲ್ಲಿದ್ದವನು, 'ಮಮ್ಮಿ ತೀರಿಕೊಂಡರಾ, ಓ ಸಾರಿ. ಅವರಿಗೆ ನಾವು ಚಿಲ್ಡ್ರನ್ ಅಂದರೆ ತುಂಬ ಇಷ್ಟ ಇತ್ತಲ್ಲವಾ ಡ್ಯಾಡ್. ಯಾವಾಗ ಬಂದು ಹೊರಗೆ ಟ್ರಿಪ್ ಹೋಗೋಣ ಮಮ್ಮಿ ಅಂದರೆ ನಾನೇ ಅಡುಗೆ ಮಾಡುತ್ತೀನಿ. ಎಲ್ಲೂ ಹೋಗೋದು ಬೇಡ ಅಂತ ಎಷ್ಟೊಂದು ಮಾಡಿಡುತ್ತಿದ್ದರು. ಓಹ್ ಇಲ್ಲಿ ನನಗೆ ಅಂಥದ್ದೇನು ಸಿಕ್ಕುವುದಿಲ್ಲ. ಹೊರಗೆ ಮಾಲ್‌ಗಳಲ್ಲಿಯೂ ಕೂಡ. ಮುಂದೆ ನೀವು ಏನು ಮಾಡಬೇಕಂತಿದ್ದೀರಿ. ಆರೋಗ್ಯ ಹೇಗಿದೆ? ಇಲ್ಲಿ ಎಲ್ಲಾ ಫೈನ್' ಎಂದ. ಅವನು ಆಡಿದ್ದರಲ್ಲಿ ಸದ್ಯಕ್ಕೆ ಬರುವ ಮಾತು ಕೇಳಿಸಲಿಲ್ಲ.

ಶಿಕಾಗೋ ವಿಶ್ವವಿದ್ಯಾಲಯದ ಪ್ರಾಧ್ಯಾಪಕ, 'ಮಮ್ಮಿಗೆ ನಾನು ಚಿಕ್ಕವನು ಅಂತ ಎಷ್ಟು ಇಷ್ಟ ಇತ್ತು ಅಲ್ಲವಾ ಡ್ಯಾಡ್. ಒಂದು ಸರ್ತಿ ನಾನು ಮಿಷಿಗನ್‌ನಿಂದ ಕಾರಲ್ಲಿ ಹೊರಟಾಗ ಮಮ್ಮಿ ಕೈಯನ್ನು ಬಲವಾಗಿ ಹಿಡಿದುಬಿಟ್ಟಿದ್ದರು. ನೀವಿಬ್ಬರು ವರ್ಷಕ್ಕೊಂದು ಸರ್ತಿಯಾದರೂ ಬಂದರೆ ನಾನು ಸರ್ವೈವ್ ಆಗುತ್ತೀನಿ ಅಂದಿದ್ದರು. ನಾವು ಇಷ್ಟು ದೂರದಲ್ಲಿದ್ದೀವಿ ಅಂತ ದಿನಾ ಬೇಜಾರು ಮಾಡಿಕೊಳ್ಳುತ್ತಿದ್ದರಲ್ಲವಾ. ಅದೇ ಅವರಿಗೆ ತೊಂದರೆ ಕೊಟ್ಟಿರಬೇಕು. ನೀನೆ ತರಗತಿಯಲ್ಲಿ ಅದೇ ತರಹದ ಒಂದು ಸೆಂಟಿಮೆಂಟ್ ಇಂಗ್ಲಿಷ್ ಪೊಯಮ್ ಪಾಠ ಮಾಡುತ್ತಿದ್ದೆ. ಹಾಗಾಗಬಾರದಿತ್ತು, ಸಾರಿ ಡ್ಯಾಡ್, ಸಾರಿ. ನನ್ನ ಹೆಂಡತಿ ಕೆಲಸದ ಮೇಲೆ ಡೆಟ್ರಾಯಿಟ್‌ಗೆ ಹೋಗಿದ್ದಾಳೆ. ಬಂದ ಮೇಲೆ ಕೇಳಿ ಹೇಳುತ್ತೀನಿ. ಕ್ಯಾರಿ ಆನ್' ಎಂದ. ಮನವಳ್ಳಿಯವರದು ಕನ್ನಡ, ಮಕ್ಕಳದು ಇಂಗ್ಲಿಷ್.

ಮನವಳ್ಳಿಯವರು ನನ್ನತ್ತ ತಿರುಗಿ ಮಕ್ಕಳು ಹೇಳುವುದು ಸರಿ. ಇಬ್ಬರು ಇಲ್ಲಿಯೇ ಹುಟ್ಟಿದವರು. ಅವರ ತೊಟ್ಟಿಲು ರಾತ್ರಿಯಲ್ಲಾ ಕಟ್ಟಿರುತ್ತಿದ್ದುದು ನಮ್ಮ ಪಕ್ಕದ ರೂಮಿನಲ್ಲಿ. ಬೆಳೆದದ್ದು ನರ್ಸ್ ಕೈಯಲ್ಲಿ. ಸಕಲ ಸವಲತ್ತಿನ ಸಂಪಾದನೆಯ ಧ್ಯಾನದಲ್ಲಿ ನಾವು ಅವರನ್ನು ದೂರ ಇಟ್ಟೆವೇನೊ. ಅವರು ಸೇರಿದ ಶಾಲೆಯೂ ದೂರ. ಓದಿದ ಕಾಲೇಜು, ವಿಶ್ವವಿದ್ಯಾಲಯ ಇನ್ನೂ ದೂರ. ಈಗ ಉದ್ಯೋಗ, ಸಂಪಾದನೆ ಅಂತ ಸಾವಿರ ಮೈಲಿ ಅಂತರದಲ್ಲಿದ್ದಾರೆ. ಯಾವಾಗಲೋ ಹೀಗೆ ದೂರವಾಣಿಯಲ್ಲಿ ದೂರ ದೂರದ ಮಾತು ಅಷ್ಟೇ. ನಾನು ಹೇಳಿದ ತಕ್ಷಣ ಅವರು ಅಷ್ಟು ದೂರ ಡ್ರೈವ್ ಮಾಡಿಕೊಂಡು ಬರುವುದು ಕಷ್ಟ. ತಿರುಗಿ ಅವರೊಂದಿಗೆ ಮಾತಾಡಿದರೆ ಉತ್ತರ ಬರುವುದೋ ಇಲ್ಲವೋ. ವಿಷಯ ತಿಳಿಯಿತಲ್ಲ ಬಿಡಿ ಎಂದರು.

ಶವ ವಾಹನ ಇನ್ನೇನು ಬರುವುದಿತ್ತು. ನಾನು ಹೋಗಿ ಒಂದು ಪುಷ್ಪಗುಚ್ಛ ತಂದು ಸುಮನಾ ದೇಹದ ಮೇಲಿರಿಸಿದೆ. ಚಂದ್ರಶೇಖರ್ ದೇವರ ಮನೆಯಲ್ಲಿದ್ದ ಹಣತೆ ತಂದು ಹಚ್ಚಿದರು. ಗಂಧದ ಕಡ್ಡಿ ಬೆಳಗಿದರು. ಶವದ ಎದುರು ನಾವಿಬ್ಬರೇ. ಮನೆಯಲ್ಲೇ ಸ್ಮಶಾನ ಮೌನ. ಬಂದರೆ ಶವ ವಾಹನದೊಂದಿಗೆ ಇನ್ನಿಬ್ಬರು ಬರಬಹುದೇನೊ? ದೇಹ ಎತ್ತುವುದರ ಸಹಾಯಕ್ಕಾಗಿ. ಚಂದ್ರಶೇಖರ್ ಹೆಂಡತಿಯ ಜೇಬಿನ ಚೀಟಿ ನೋಡತೊಡಗಿದರು.

ಆಡುವ ನವಿಲು ತೀರ್ಥದ ಕಣಿವೆಯೇ,